ದಿನಾಂಕಃ 08.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ**

ನಾನು ಪ್ರಸ್ತುತ ದಾವೆಯಲ್ಲಿ ನಮ್ಮ ಕುಟುಂಬದ ವಂಶಾವಳಿಯನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ನನ್ನ ತಂದೆ ಸನ್ 1946 ರಲ್ಲಿ ದತ್ತಕ ಹೋಗಿದ್ದು, ಆವಾಗ ನಾನು ಜನಿಸಿರಲಿಲ್ಲ ಎಂದರೆ ನಿಜ. ದತ್ತಕ ಪತ್ರ ಆಗಿದ್ದರಿಂದ ನನ್ನ ತಂದೆ ದಾವಾಸ್ತಿಗೆ ಮಾಲೀಕನಾಗಿರುತ್ತಾನೆಂದರೆ ನಿಜ.

ನನ್ನ ತಂದೆ ಯಾವ ಕಾಲಕ್ಕೂ ಒಕ್ಕಲುತನ ಮಾಡಿಲ್ಲ, ಆತ ಮದ್ಯ ವ್ಯಸನಿಯಾಗಿದ್ದು, ತಿರುಗಾಡಿಕೊಂಡಿದ್ದ ಎಂದರೆ ಸರಿಯಲ್ಲ. ದಿ.16.04.1998 ರಂದು ನನ್ನ ತಂದೆ ಪ್ರತಿವಾದಿಯಿಂದ ರೂ.4,60,000/-ಗಳನ್ನು ತೆಗೆದುಕೊಂಡು ಕರಾರು ಪತ್ರ ಬರೆದುಕೊಟ್ಟಿರುತ್ತಾನೆಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ತಂದೆಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ದಿ. 03.11.2018 ರಂದು ನನ್ನ ತಂದೆಯು ಪ್ರತಿವಾದಿಯಿಂದ ರೂ.6,97,150/-ಗಳನ್ನು ಸಾಲವಾಗಿ ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು, ನನ್ನ ತಂದೆ ಹಾಗೂ ನನ್ನ ಮಗಳು ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ದಿ. 29.04.1990 ರಂದು ನನ್ನ ಮದುವೆಯನ್ನು ಪ್ರತಿವಾದಿಯು ಮಾಡಿರುತ್ತಾನೆಂದರೆ ಸರಿಯಲ್ಲ. ಅದೇ ರೀತಿ ದಿ.05.11.2018 ರಂದು ನನ್ನ ಮಗಳಾದ ಕನ್ಯಾಕುಮಾರಿಯ ಮದುವೆಯನ್ನು ಸಹ ಪ್ರತಿವಾದಿ ರೂ. 2,41,150/-ಗಳನ್ನು ಖರ್ಚು ಮಾಡಿ ಮಾಡಿರುತ್ತಾನೆಂದರೆ ಸರಿಯಲ್ಲ.

ನನ್ನ ಗಂಡ ತೀರಿಕೊಂಡ ನಂತರ ನಮ್ಮ ಕುಟುಂಬದ ನಿರ್ವಹಣೆಗಾಗಿ ಪ್ರತಿವಾದಿಯು ಪ್ರತಿ ತಿಂಗಳು ರೂ. 5,000/- ಗಳನ್ನು ಮನಿಯಾರ್ಡರ ಮಾಡುತ್ತಿದ್ದ ಎಂದರೆ ಸಾಕ್ಷಿಯು ಕೇವಲ 03 ವರ್ಷಗಳವರೆಗೆ ಮಾತ್ರ ತಿಂಗಳಿಗೆ ರೂ.2,500/-

ಗಳಂತೆ ಕಳುಹಿಸುತ್ತಿದ್ದ ಎಂದು ನುಡಿಯುತ್ತಾರೆ. ಸದರಿ ಹಣವನ್ನು ಪ್ರತಿವಾದಿ ನಮ್ಮ ದೈನಂದಿನ ಖರ್ಚಿಗಾಗಿ ಕಳುಹಿಸುತ್ತಿದ್ದ ಎಂದರೆ ನಿಜ. ಸದರೀ ಸಂಗತಿಯನ್ನು ದಾವೆ ಹಾಕುವ ಕಾಲಕ್ಕೆ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಸದರಿ ಸಂಗತಿಯನ್ನು ದಾವೆಯಿಲ್ಲಿ ಏಕೆ ನಮೂದಿಸಿರುವುದಿಲ್ಲ ಎಂಬುದರ ಬಗ್ಗೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ದಿ. 31.07.2017 ರಂದು ತೀರಿಕೊಂಡಿರುತ್ತಾರೆಂದರೆ ನಿಜ. ಅವರು ತೀರಿಕೊಳ್ಳುವ ಕಾಲಕ್ಕೆ ಸಾಕಷ್ಟು ಜನರಿಗೆ ಸಾಲವನ್ನು ಕೊಡುವುದಿತ್ತು ಎಂದರೆ ಸರಿಯಲ್ಲ. ನನ್ನ ತಂದೆಯ ಅಂತ್ಯಕ್ರಿಯೆಯ ಖರ್ಚನ್ನು ಪ್ರತಿವಾದಿಯು ಮಾಡಿರುತ್ತಾರೆಂದರೆ ನಿಜ. ಅವರ ವೈಕುಂಠ ಸಮಾರಾಧನೆ ಕಾರ್ಯವನ್ನು ಸಹ ಪ್ರತಿವಾದಿಯು ನೇರವೇರಿಸಿರುತ್ತಾನೆಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ದಿ.10.07.2004 ರಂದು ರೂ.1,18,000/-, ದಿ.08.08.2005 ರಂದು ರೂ. 88,000/-, ದಿ.28.08.2006 ರಂದು ರೂ.1,18,000/- ಗಳನ್ನು ಕೈಗಡ ಸಾಲ ಪಡೆದಿರುತ್ತಾರೆಂದರೆ ಸರಿಯಲ್ಲ. ಸದರೀ ಸಂಗತಿಯು ನನಗೆ ಹಾಗೂ ನನ್ನ ಮಗಳಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಿ. 05.09.2006 ರಂದು ಮೇಲೆ ಹೇಳಿದ ತನಗೆ ಮುಟ್ಟಿದ ಬಗ್ಗೆ ನನ್ನ ತಂದೆ ಒಂದು ದಾಖಲೆಯನ್ನು ಬರೆದುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರೀ ದಾಖಲೆಯಂತೆ ತಾನು ಹಣವನ್ನು ಮರಳಿ ಕೊಡದಿದ್ದರೆ ತನ್ನ ಆಸ್ತಿಗಳಲ್ಲಿ ಒಂದು ಆಸ್ತಿಯನ್ನು ಬರೆದುಕೊಡುವುದಾಗಿ ಒಪ್ಪಿ ಕೊಂಡಿದ್ದ ಎಂದರೆ ಸರಿಯಲ್ಲ. ಸದರೀ ದಾಖಲೆಗೆ ನನ್ನ ತಂದೆಯೊಂದಿಗೆ ನಾನು ಮತ್ತು ನನ್ನ ಮಗಳು ಸಹ ಸಹಿ ಮಾಡಿದ್ದು, ನಮ್ಮ ಭಾವಚಿತ್ರಗಳನ್ನು ಸಹ ಅಂಟಿಸಲಾಗಿರುತ್ತದೆಂದರೆ ಸರಿಯಲ್ಲ.

ದಿ. 10.03.2007 ರಂದು ರೂ. 1,20,000/-ದಿ. 24.04.2008 ರಂದು ರೂ. 1,10,000/-, ದಿ.28.03.2009 ರಂದು ರೂ. 1,24,000/-, ದಿ. 20.05.2009 ರಂದು ರೂ.80,000/- ಗಳನ್ನು ಕುಟುಂಬದ ಅಡಚಣೆಗಾಗಿ ನನ್ನ

ತಂದೆ ಪ್ರತಿವಾದಿಯಿಂದ ಪಡೆದುಕೊಂಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಸದರಿ ಮೇಲೆ ಹೇಳಿದ ಹಣ ಮುಟ್ಟಿದ ಬಗ್ಗೆ ದಿ.26.05.2009 ರಂದು ನನ್ನ ತಂದೆ ಪ್ರತಿವಾದಿಗೆ ಕರಾರು ಪತ್ರ ಬರೆದುಕೊಟ್ಟಿದ್ದು, ಅದಕ್ಕೆ ನಾನು ಹಾಗೂ ನನ್ನ ಮಗಳು ಸಹ ಸಹಿ ಹಾಕಿದ್ದು, ನಮ್ಮ ಭಾವಚಿತ್ರಗಳನ್ನು ಸಹ ಅಂಟಿಸಿರುತ್ತಾರೆಂದರೆ ಸರಿಯಲ್ಲ.

ನನ್ನ ತಂದೆ ಎಲ್ಲ ಕಡೆ ಸಾಕಷ್ಟು ಸಾಲ ಮಾಡಿದ್ದು, ಅಲ್ಲದೇ ಪ್ರತಿವಾದಿ ನನ್ನ ತಂದೆಗೆ ಹಣಕಾಸಿನ ಸಹಾಯ ಮಾಡಿದ್ದರಿಂದ ದಿ.07.03.2008 ರಂದು ದಾವಾಸ್ತಿಗಳ ಪೈಕಿ ಸರ್ವೆ ನಂಬರ- 81ನೇದ್ದನ್ನು ಪ್ರತಿವಾದಿಗೆ ಬಿಟ್ಟುಕೊಡುತ್ತೇನೆಂದು ವಚನ ಕೊಟ್ಟಿದ್ದ ಎಂದರೆ ಸರಿಯಲ್ಲ. ತದನಂತರ ನನ್ನ ತಂದೆ ನೊಂದಾಯಿತ ಹ ಕ್ಕು ಪತ್ರದ ಮೂಲಕ ಸದರಿ ದಾವಾಸ್ತಿಯನ್ನು ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಸದರಿ ನೊಂದಾಯಿತ ಪತ್ರ ಆದಾಗಿನಿಂದ ಇವತ್ತಿನವರೆಗೂ ಸದರಿ ದಾವಾಸ್ತಿಯ ಪಹಣಿಪತ್ರಿಕೆಯಲ್ಲಿ ಪ್ರತಿವಾದಿಯ ಹೆಸರು ಮಾಲೀಕ ನಾತೆಯಿಂದ ದಾಖಲು ಇರುತ್ತದೆಂದರೆ ನನಗೆ ಗೊತ್ತಿಲ್ಲ. ಸದರಿ ದಾವಾಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿ ಕಂದಾಯ ಪಾವತಿ ಮಾಡುತ್ತಾ ಬಂದಿದ್ದು, ಆತನ ಕಬ್ಜಾ ವಹಿವಾಟಿಯಲ್ಲಿ ಇರುತ್ತದೆಂದರೆ ನನಗೆ ಗೊತ್ತಿಲ್ಲ. ಸನ್ 2008 ರಿಂದ ಇವತ್ತಿನವರೆಗೂ ಸಹ ಸದರಿ ದಾವಾಸ್ತಿಯ ಪಹಣಿಪತ್ರಿಕೆಯನ್ನು ತೆಗೆಸಿ ನೋಡಿರುವುದಿಲ್ಲ. ಸನ್ 2008 ರಿಂದ ಪ್ರಸ್ತುತ ದಾವೆ ಸಲ್ಲಿಸುವವರೆಗೂ ಸದರಿ ನೊಂದಾಯಿತ ಹಕ್ಕಬಿಟ್ಟು ಪತ್ರ ಕಾನೂನು ಬಾಹಿರವಾಗಿರುತ್ತದೆಂದು ನಾನು ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ನಿಜ.

ನನ್ನ ಮಗಳು ಕನ್ಯಾಕುಮಾರಿಯ ಮದುವೆಯ ಪೂರ್ವದಲ್ಲಿ ನನ್ನ ಗಂಡ ತೀರಿಕೊಂಡಿದ್ದರು ಎಂದರೆ ನಿಜ. ಸದರೀ ಸಮಯದಲ್ಲಿ ನಮ್ಮ ಹತ್ತಿರ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಬ್ಯಾಂಕ ಖಾತೆ ಹೊಂದಿದ್ದೆ , ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ಮಗಳ ಮದುವೆಯು ಸನ್ 2017 ರಲ್ಲಿ

ಆಗಿರುತ್ತದೆ. ಆ ಸಮಯದಲ್ಲಿ ನನ್ನ ಬ್ಯಾಂಕ ಖಾತೆಯಲ್ಲಿ ಕೇವಲ 3-4 ಸಾವಿರ ಹಣ ಮಾತ್ರ ಇದ್ದು, ಸದರಿ ಹಣವನ್ನು ಸಹ ಪ್ರತಿವಾದಿಯು ಕಳುಹಿಸಿದ್ದ ಎಂದರೆ ಸರಿಯಲ್ಲ. ಸದರೀ ಬ್ಯಾಂಕ ಪುಸ್ತಕವನ್ನು ಹಾಜರುಪಡಿಸುತ್ತೇನೆ.

ನಾನು ಒಕ್ಕಲುತನ ಮಾಡುವುದಿಲ್ಲ. ನನ್ನ ಮಗಳು ಮತ್ತು ಅಳಿಯನನ್ನು ಬಿಟ್ಟು ನಾನೊಬ್ಬಳೇ ಪ್ರತ್ಯೇಕವಾಗಿ ವಾಸವಾಗಿರುತ್ತೇನೆಂದರೆ ಸರಿಯಲ್ಲ. ನನಗೆ ಯಾವುದೇ ಆದಾಯದ ಮೂಲಗಳು ಇರುವುದಿಲ್ಲ. ನನ್ನ ಬ್ಯಾಂಕ ಖಾತೆಯಲ್ಲಿ ರೂ. 02 ಲಕ್ಷ ಹಣ ಇತ್ತೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಯ ಸಾಲವನ್ನು ಪ್ರತಿವಾದಿ ತೀರಿಸಿದ್ದು ಅಲ್ಲದೇ ನಮ್ಮ ಕುಟುಂಬದ ದೈನಂದಿನ ಖರ್ಚಿಗಾಗಿ ಹಣವನ್ನು ಕೊಟ್ಟಿದ್ದು ಹಾಗೂ ಮಗಳ ಮದುವೆ ಖರ್ಚನ್ನು ಭರಿಸಿದ್ದರಿಂದ ದಾವಾಸ್ತಿ ಸರ್ವೆ ನಂಬರ 331ಅ/2 ನೇದ್ದನ್ನು ನಾನು ಪ್ರತಿವಾದಿಗೆ ಭಕ್ಷಿಸ ಪತ್ರದ ಮೂಲಕ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಭಕ್ಷಿಸ ಪತ್ರ ನೊಂದಣಿ ಕಾಲಕ್ಕೆ ನಾನು ಹಾಜರು ಇರದೇ ಇದ್ದ ಕಾರಣ ಸಬ್ ರಜಿಸ್ಟ್ರರವರ ಕಚೇರಿಯ ಗುಮಾಸ್ತನು ನಾನು ಇದ್ದಲ್ಲಿಗೆ ಬಂದು ನನ್ನ ಭಾವಚಿತ್ರ ಹಾಗೂ ಸಹಿಯನ್ನು ಪಡೆದುಕೊಂಡು ಹೋಗಿರುತ್ತಾನೆಂದರೆ ಸರಿಯಲ್ಲ. ಪ್ರತಿವಾದಿಯು ಮೇಲೆ ಹೇಳಿದ ಭಕ್ಷಿಸ ಪತ್ರವನ್ನು ಮೋಸದಿಂದ ಪಡೆದುಕೊಂಡಿರುತ್ತಾನೆಂದು ನಾನು ಪೊಲೀಸ ದೂರನ್ನು ಸಲ್ಲಿಸಿರುವುದಿಲ್ಲ. ಸದರೀ ಭಕ್ಷಿಸ ಪತ್ರದ ಆಧಾರದ ಮೇರೆಗೆ ಪ್ರತಿವಾದಿಯ ಹೆಸರಿಗೆ ಡೈರಿ ಮಂಜೂರಾಗಿದ್ದು, ಆ ಪ್ರಕಾರ ಆತನ ಹೆಸರು ಪಹಣಿಪತ್ರಿಕೆಯಲ್ಲಿ ದಾಖಲಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಸದರೀ ಭಕ್ಷಿಸ ಪತ್ರ ಆದಾಗಿನಿಂದ ಪ್ರತಿವಾದಿ ಸದರಿ ಜಮೀನಿನ ಕಬ್ಜಾ ವಹಿವಾಟಿಯಲ್ಲಿದ್ದು, ಆತನ ಹೆಸರು ಪಹಣಿಪತ್ರಿಕೆಯಲ್ಲಿ ದಾಖಲು ಇರುತ್ತದೆಂದರೆ ಸರಿಯಲ್ಲ. ನಾನು ಸದರೀ

ದಾವಾಸ್ತಿಯ ಕಬ್ಜಾ ವಹಿವಾಟಿಯಲ್ಲಿ ಇರುತ್ತೇನೆಂದು ನನ್ನ ಬಾಯಿ ಹೇಳಿಕೆಯನ್ನು ಬಿಟ್ಟು ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನನ್ನ ಹೆಸರಿಗೆ ಪಹಣಿಪತ್ರಿಕೆ ಇರುತ್ತದೆಂದು ಹೇಳುತ್ತಾರೆ. ನಾನು ಹಾಜರುಪಡಿಸಿದ ಪಹಣಿಪತ್ರಿಕೆಯಲ್ಲಿ ಪ್ರತಿವಾದಿಯ ಹೆಸರು ಇರುತ್ತದೆಂದರೆ ಸರಿಯಲ್ಲ.

ದಾವಾಸ್ತಿ ಸರ್ವೆ ನಂಬರ 331ಅ/2 ನೇದ್ದನ್ನು ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾನೆಂದರೆ ಸರಿಯಲ್ಲ. ಸದರೀ ಜಮೀನಿನಲ್ಲಿ ಪ್ರತಿವಾದಿ ಕಬ್ಬನ್ನು ಬೆಳೆದು ಸಕ್ಕರೆ ಕಾರ್ಖಾನೆಗೆ ತಮ್ಮ ಹೆಸರಿಗೆ ಕಳುಹಿಸಿದ್ದು, ಬಿಲ್ಲನ್ನು ಸಹ ಪಡೆದುಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ವಿರುದ್ಧ ದಾವೆ ಸಲ್ಲಿಸಿದರೆ ಲಕ್ಷಾಂತರ ಹಣ ಸಿಗುತ್ತದೆಂದು ನನ್ನ ಅಳಿಯ ಹೇಳಿದ್ದರಿಂದ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇನೆಂದರೆ ನಿಜ. ನನ್ನ ಅಳಿಯನ ಮಾತನ್ನು ಕೇಳಿಕೊಂಡು ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ